O.S 285/13 PW – 1

ದಿನಾಂಕಃ 10-01-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂ ದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರ Sri S.B.ವಕೀಲರಿಂದಃ**

ದಾವಾ ಸ್ವತ್ತಿನ ಪೂರ್ವಕ್ಕೆ ಯಲ್ಲಜ್ಜಿ ಚಿಕ್ಕಣ್ಣರವರ ಜಮೀನು ಇರುತ್ತದೆ, ಪಶ್ಚಿಮಕ್ಕೆ ಯಲ್ಲಜ್ಜಿ ದೊಡ್ಡಯ್ಯರವರ ಜಮೀನು , ಉತ್ತರಕ್ಕೆ ನಿಂಗಮ್ಮರವರ ಜಮೀನು ಇರುತ್ತದೆ. ಉತ್ತರಕ್ಕೆ ನಿಂಗಮ್ಮರವರ ಜಮೀನನ್ನು ಹೊರತುಪಡಿಸಿ ರಾಜಣ್ಣ ಮತ್ತು ಚಂದ್ರಪ್ಪರವರ ಜಮೀನುಗಳೂ ಸಹ ಇರುತ್ತದೆ. ಉತ್ತರಕ್ಕೆ ರಾಜಣ್ಣ ಮತ್ತು ಚಂದ್ರಪ್ಪರವರ ಜಮೀನು ಇರುವುದನ್ನು ತೋರಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪಶ್ಚಿಮಕ್ಕೆ ಯಲ್ಲಜ್ಜಿ ದೊಡ್ಡಯ್ಯರವರ ಜಮೀನನ್ನು ಹೊರತುಪಡಿಸಿ ರಾಮಣ್ಣ ಮತ್ತು ಇತರರ ಜಮೀನು ಇರುತ್ತದೆ. ನಾನು ಪಶ್ಚಿಮಕ್ಕೆ ದೊಡ್ಡಯ್ಯ ಮತ್ತು ರಾಮಣ್ಣರವರ ಜಮೀನು ರುವುದನ್ನು ತೋರಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಜಮೀನಿನ ದಕ್ಷಿಣಕ್ಕೆ ಮುತ್ತಯ್ಯ, ಚಂದ್ರಪ್ಪ , ರಾಜಣ್ಣರವರ ಜಮೀನು ಇರುತ್ತದೆ. ನಾನು ನನ್ನ ಜಮೀನಿನ ದಕ್ಷಿಣಕ್ಕೆ ಮುತ್ತಯ್ಯ, ಚಂದ್ರಪ್ಪ , ರಾಜಣ್ಣರವರ ಜಮೀನು ಇರುತ್ತದೆ ಎಂದು ತೋರಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ದಾವಾ ಚಕ್ಕುಬಂದಿಯಲ್ಲಿ ಇರುವ ವ್ಯಕ್ತಿಗಳು ಸದರಿ ಚಕ್ಕುಬಂದಿಯಲ್ಲಿರುತ್ತಾರೆಂದು ತೋರಿಸುವ ಸಲುವಾಗಿ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪಹಣಿಯಲ್ಲಿ ಆಜು-ಬಾಜೂದಾರರ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ಆಜು-ಬಾಜೂದಾರರ ಹೆಸರು ನಮೂದು ಇರದೇ ಇದ್ದರೂ ನಾನು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸ.ನಂ. 52/7 ಆಗಿರುತ್ತದೆ. ದಾವಾ ಸ್ವತ್ತಿಗೆ ನಾನು ಹೇಳಿದ ಚಕ್ಕುಬಂದಿ ತಪ್ಪು ಚಕ್ಕುಬಂದಿಯಾಗಿದ್ದು , ದಾವಾ ಸ.ನಂ. 52/7 ಅಸ್ತಿತ್ವದಲ್ಲೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಡಬ್ಬಲ್ ಡಿಗ್ರಿದಾರನಾಗಿರುತ್ತೇನೆ. ನಾನು ನನ್ನ ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ವನ್ನು ಓದಿ ತಿಳಿದುಕೊಂಡಿದ್ದು , ಅದರಲ್ಲಿರುವ ವಿಚಾರಗಳು ನನ್ನ ಗಮನದಲ್ಲಿರುತ್ತದೆ.

ದಾವಾ ಸ್ವತ್ತಿನ ಪಶ್ಚಿಮಕ್ಕೆ ಬುಕ್ಕಾಪಟ್ಟಣದಿಂದ ತಾವರೆಕೆರೆಗೆ ಹೋಗುವ ರಸ್ತೆ ಇರುತ್ತದೆಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ನನ್ನ ಜಮೀನಿನ ಮೂಲಕ ಪಶ್ಚಿಮದ ಕಡೆಗೆ ಹೋಗುವ ಬಂಡಿ ದಾರಿಗೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಜಮೀನಿನ ಮೂಲಕ ಪಶ್ಚಿಮದ ಕಡೆ ಯಾವುದೇ ಬಂಡಿ ದಾರಿ ಹಾದು ಹೋಗುವುದಿಲ್ಲ ಮತ್ತು ಆ ಬಗ್ಗೆ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಂಡಿ ದಾರಿ ಇರುವ ಛಾಯಾಚಿತ್ರ ವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಬಂಡಿ ದಾರಿ ಇರುವ ಛಾಯಾಚಿತ್ರ ವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ನನ್ನ ವಕೀಲರ ಮೂಲಕ ಹಾಜರುಪಡಿಸಿರುತ್ತೇನೆಂದು ನುಡಿದಿರುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ದಾವಾ ಸ್ವತ್ತಿನಲ್ಲಿ ಪಶ್ಚಿಮದ ಕಡೆ ಬಂಡಿ ದಾರಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲೇ ಇಲ್ಲದಿದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂ. 52/7 ರ ಪೂರ್ವದ ಕಡೆಗೆ ಒಂದು ರಸ್ತೆ ಹಾದು ಹೋಗುತ್ತದೆ ಎಂದರೆ ಸರಿ . ನನ್ನ ವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣಾ ಪತ್ರದಲ್ಲಾಗಲೀ ಸ.ನಂ. 52/7 ರ ಪೂರ್ವದ ಕಡೆ ಹಾದು ಹೋಗಿರುವ ರಸ್ತೆಯ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ . ನಾನು ಸದರಿ ರಸ್ತೆಯ ಬಗ್ಗೆ

ಹೇಳಿದಲ್ಲಿ ನನ್ನ ದಾವೆಗೆ ತೊಂದರೆ ಆಗುತ್ತದೆಂದು ಉದ್ದೇಶಪೂರ್ವಕವಾಗಿ ಸದರಿ ವಿಚಾರವನ್ನು ಮುಚ್ಚಿಟ್ಟು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಅರ್ಧ ಕಿಮೀ ಅಂತರದಲ್ಲಿ ತಾವರೆಕೆರೆ – ಬುಕ್ಕಾಪಟ್ಟಣ ರಸ್ತೆ ಇರುತ್ತದೆ ಅದೇ ರೀತಿ ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯೂ ಸಹ ಅರ್ಧ ಕಿಮೀ ಅಂತರದಲ್ಲಿರುತ್ತದೆ.

ನನಗೆ ನಿಖರವಾಗಿ ನನ್ನ ಮತ್ತು ಪ್ರತಿವಾದಿಯ ನಡುವೆ ಆದ ರಾಜೀ ಪಂಚಾಯತಿಯ ದಿನಾಂಕಗಳನ್ನು ಹೇಳಲು ಬರುವುದಿಲ್ಲ, ಆದರೆ ಊರಿನ ಮುಖಂಡರ ಸಮ್ಮುಖದಲ್ಲಿ ರಾಜೀ ಪಂಚಾಯತಿ ಆಗಿರುತ್ತದೆ. ಪಂಚಾಯತಿಯನ್ನು ನಮ್ಮ ಗ್ರಾಮದ ಯಾವ ಮುಖಂಡರು ಹಾಜರಿದ್ದು ಮಾಡಿರುತ್ತಾರೆಂದು ನನಗೆ ಈಗ ನೆನಪಾಗುತ್ತಿರುವುದಿಲ್ಲ. ನನ್ನ ಮತ್ತು ಪ್ರತಿವಾದಿಯರ ನಡುವೆ ಊರಿನಲ್ಲಿ ಯಾವುದೇ ರಾಜೀ ಪಂಚಾಯತಿ ಆಗಿಲ್ಲದೇ ಇದ್ದರೂ ಸುಳ್ಳು ವಿಚಾರವನ್ನು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ ರಾಜೀ ಪಂಚಾಯತಿ ಆಗಿಲ್ಲದೇ ಇರುವ ಕಾರಣ ಪಂಚಾಯತಿ ಮಾಡಿದ ದಿನಾಂಕ ಮತ್ತು ಹಾಜರಿದ್ದ ಮುಖಂಡರ ಬಗ್ಗೆ ಹೇಳಲಾಗುತ್ತಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದೇ ಇರುವ ಕಾರಣ, ಪ್ರತಿವಾದಿಯರು ದಾವಾ ಸ್ವತ್ತನ್ನು ಒತ್ತುವರಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯು ದಾವಾ ಸ್ವತ್ತಿಗೆ ಹೋಗಲು ರಸ್ತೆಯನ್ನು ಬಿಡದೇ ಇದ್ದ ಬಗ್ಗೆ, ದಾವಾ ಸ್ವತ್ತನ್ನು ಒತ್ತುವರಿ ಮಾಡಿದ ಬಗ್ಗೆ ಸ್ಪಷ್ಟೀಕರಣವನ್ನು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಪ್ರತಿವಾದಿಯರು ಸುಮಾರು 20 ವರ್ಷಕ್ಕಿಂತ ಮೇಲ್ಪಟ್ಟು ತಮ್ಮ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ. ಅವರು ಅಂದಾಜು 50 ವರ್ಷದಿಂದ ತಮ್ಮ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ನಾನು ಪ್ರತಿವಾದಿಯರಿಗೆ ತೊಂದರೆ ಕೊಟ್ಟಲ್ಲಿ ಅವರು ಸದರಿ ಸ್ವತ್ತನ್ನು

ಮಾರಾಟ ಮಾಡುತ್ತಾರೆಂಬ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಅವರ ವಿರುದ್ಧ ತಂದಿರುತ್ತೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ಓದಿ ತಿಳಿದುಕೊಂಡು , ಯಾವುದೇ ತಪ್ಪು ಮತ್ತು ಸುಳ್ಳು ಇರುವುದಿಲ್ಲವೆಂದು ನನ್ನ ಅರಿವಿಗೆ ಬಂದ ನಂತರ ನಾನು ಸಹಿ ಮಾಡಿರುತ್ತೇನೆ.

**ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ**
**ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.